# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 180 |
| ಸದಸ್ಯರ ಹೆಸರು | ಶ್ರೀ ರಿಜ್ವಾನ್ ಅರ್ಷದ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ವಿಷಯ | ಮಾಸಾಶನ ವಿತರಣೆಯಲ್ಲಿ ವಿಳಂಬ |
| ಉತ್ತರಿಸಬೇಕಾದ ದಿನಾಂಕ | 11.07.2018 |
| ಉತ್ತರಿಸುವ ಸಚಿವರು | ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |
| **ಪ್ರಶ್ನೆ** | **ಉತ್ತರ** |
| ಅ) ಗದಗ ಜಿಲ್ಲೆ, ರೋಣ ಪಟ್ಟಣ, ಕಲ್ಯಾಣ ನಗರದ ಕುಷ್ಠರೋಗಿ ನಿವಾಸಿಯೊಬ್ಬರಿಗೆ ಕಳೆದ 8 ತಿಂಗಳಿಂದ ಮಾಸಾಶನ ಮಂಜೂರು ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಮಾಸಾಶನ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗಿದೆಯೇ; ಬಂದಿದ್ದಲ್ಲಿ ಕಾಲಮಿತಿಯೊಳಗೆ ಇಲ್ಲದಿದ್ದಲ್ಲಿ ಯಾವಾಗ ಮಂಜೂರು ಮಾಡಲಾಗುವುದು ಈ ನಿಟ್ಟಿನಲ್ಲಿ ಸರ್ಕಾರದ ನಿರ್ಧಾರವೇನು? (ಪೂರ್ಣ ವಿವರ ನೀಡುವುದು) | ಗದಗ ಜಿಲ್ಲೆ, ರೋಣ ಪಟ್ಟಣದಲ್ಲಿ, ಕಲ್ಯಾಣನಗರದ ಕುಷ್ಠರೋಗಿ ನಿವಾಸಿಯೊಬ್ಬರಿಗೆ ಕಳೆದ 8 ತಿಂಗಳಿಂದ ಮಂಜೂರು ಮಾಡದಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ಆದರೆ ರೋಣ ಪಟ್ಟಣದ ವಾರ್ಡ್-19 ರ ನಿವಾಸಿಯಾದ ಮಕ್ತುಮ್‌ಸಾಬ ರಾಜಾಖಾನ ಇವರು ಕುಷ್ಠರೋಗಿಯಾಗಿದ್ದು, ಇವರಿಗೆ ಪ್ರತಿ ತಿಂಗಳು ಮಾಸಾಶನ ಪಾವತಿಸಲಾಗುತ್ತಿದೆ. |
| ಆ) ಸರ್ಕಾರದ ಉತ್ತಮವಾದ ಇಂತಹ ಪ್ರೋತ್ಸಾಹದಾಯಕ ಯೋಜನೆಗಳನ್ನು ವಿಫಲಗೊಳಿಸುವ ಫಲಾನುಭವಿಗಳನ್ನು ಗುರುತಿಸುವಲ್ಲಿ ಅಸಡ್ಡೆ ತೋರುವ, ವಿಳಂಬ ಮಾಡುವ, ಅಥವಾ ವಿನಾಕಾರಣ ತೊಂದರೆಯನ್ನುಂಟುಮಾಡುವಂತಹ ಅಧಿಕಾರಿ/ನೌಕರರ ವಿರುದ್ಧ ಕೈಗೊಂಡ ಕ್ರಮಗಳೇನು; | ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅರ್ಜಿದಾರರ ವಾಸಸ್ಥಳದ ವ್ಯಾಪ್ತಿಯಲ್ಲಿ ಬರುವ ಹೋಬಳಿ ಮಟ್ಟದ ನಾಡ ಕಛೇರಿಗಳಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಎಲ್ಲಾ ಸಾಮಾಜಿಕ ಭದ್ರತಾ ಯೋಜನೆಗಳಿಗೆ ಸಂಬಂಧಿಸಿದಂತೆ ಆದೇಶಗಳನ್ನು ಹಾಗೂ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ. ಅರ್ಹ ಫಲಾನುಭವಿಗಳನ್ನು ಸ್ಥಾನಿಕ ಪರಿಶೀಲನೆ ಮುಖಾಂತರ ಗುರುತಿಸಿ ಮಂಜೂರಾತಿ ನೀಡುವಲ್ಲಿ ವಿಳಂಬವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮಾಸಿಕ ಪಿಂಚಣಿ ಯೋಜನೆಗಳನ್ನು "ಸಕಾಲ" ಯೋಜನೆಯಡಿ ತರಲಾಗಿದ್ದು, ನಿಗಧಿತ ಕಾಲಮಿತಿ 45 ದಿನಗಳೊಳಗೆ ಅರ್ಜಿಗಳ ವಿಲೇವಾರಿಗೆ ಕ್ರಮವಹಿಸಲಾಗುತ್ತಿದೆ. ನಿಗಧಿತ ಕಾಲಮಿತಿಯೊಳಗೆ ವಿಲೇವಾರಿಗೊಳಿಸದ ಅಧಿಕಾರಿ/ನೌಕರರ ವಿರುದ್ಧ ಸಕಾಲ ಅಧಿನಿಯಮದಂತೆ ಕ್ರಮ ಜರುಗಿಸಲಾಗುತ್ತದೆ.<br><br>ಅರ್ಜಿ ಸ್ವೀಕೃತಿಯಿಂದ ಪಿಂಚಣಿ ಪಾವತಿವರೆಗೆ ವಿವಿಧ ಹಂತದ ಸಮಸ್ಯೆಗಳ ನಿವಾರಣೆ ಕುರಿತು ಹೋಬಳಿ ಮಟ್ಟದಲ್ಲಿ ಪಿಂಚಣಿ ಅದಾಲತ್ ನಡೆಸಲಾಗುತ್ತಿದೆ. |
| ಇ) ಈ ಪ್ರಕರಣದಲ್ಲಿ ಅದಂತಹ ವಿಳಂಬ ಧೋರಣೆಯ ಬಗ್ಗೆ ವಿಚಾರಣೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರದ ಸ್ಪಷ್ಟ ಅಭಿಪ್ರಾಯವೇನು? | ಅನ್ವಯಿಸುವುದಿಲ್ಲ |

ಆರ್‌ಡಿ 97 ಡಿಎಸ್‌ಪಿ 2018

ಆರ್.ವಿ.ದೇಶಪಾಂಡೆ
ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಸಚಿವರು